24-02-2025
State by Ld.PP
Accused- LU
Orders on IA filed
U/Sec.311 of CrPC

## ದಂಡ ಪ್ರಕ್ರಿಯಾ ಸಂಹಿತೆ ಕಲಂ.311ರ ಅರ್ಜಿಯ ಮೇಲೆ ಆದೇಶ

ಆರೋಪಿಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.311ರ ಅಡಿಯಲ್ಲಿ ಅರ್ಜಿ ಸಲ್ಲಿಸಿ, ಮಾನ್ಯ ನ್ಯಾಯಾಲಯವು ಫ್ರಾ.ಸಾ.1, 10 ರಿಂದ 14 ಇವರನ್ನು ಮುಂದುವರೆದ ಪಾಟೀಸವಾಲು ಮಾಡಲು ಅನುಮತಿ ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರ್ಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, – ಅರ್ಜಿಯಲ್ಲಿ ಬರೆದ ವಿಷಯಗಳು ಸಂಪೂರ್ಣ ಸುಳ್ಳಿನಿಂದ ಕೂಡಿದ್ದು, ಎಲ್ಲಾ ಸಾಕ್ಷಿಗಳ ವಿಚಾರಣೆ ಮುಗಿದಿರುವುದರಿಂದ ಸದರಿ ಅರ್ಜಿ ಉರ್ಜಿತವಾಗತಕ್ಕದ್ದಲ್ಲ, ಅರ್ಜಿಯನ್ನು ವಜಾ ಮಾಡಬೇಕೆಂದು ತಕರಾರು ಸಲ್ಲಿಸಿರುತ್ತಾರೆ.

3. ಅರ್ಜಿ, ತಕರಾರು, ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ – ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ.

ಅಂಶ 1ಃ– ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ.311ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬಹುದೇ?

ಅಂಶ 2ಃ– ಯಾವ ಆದೇಶ?

4. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇದೆ.

ಅಂಶ 1ಃ– ನಕಾರಾತ್ಮಕ

ಅಂಶ 2ಃ– ಕೊನೆಯ ಆದೆಶದಂತೆ.

5. ಕಾರಣಗಳು –

ಅಂಶ 1ಃ- ಅರ್ಜಿ, ತಕರಾರು, ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ ಆರೋಪಿತರ ಮೇಲೆ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣಾ ಅಧಿಕಾರಿಯವರು ಭಾರತೀಯ ದಂಡ ಸಂಹಿತೆ ಕಲಂ.306, 506 ರ ಅಡಿಯಲ್ಲಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತಾರೆ.

6. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ದಿನಾಂಕ.05-05-2023 ರಂದು ದೋಷಾರೋಣೆಯನ್ನು ರಚನೆ ಮಾಡಿ , ನಂತರ ಸದರಿ ಪ್ರಕರಣದಲ್ಲಿ ಪ್ರಾ.ಸಾ.1 ರಿಂದ 16 ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು , ದಿ.11-11-2024 ರಂದು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿತರ ಹೇಳಿಕೆ ದಾಖಲು ಮಾಡಿದ್ದು , ಸದರಿ ಪ್ರಕರಣ ದಿ.02-12-2024 ರಂದು ವಾದ ವಿವಾದಕ್ಕಾಗಿ ನಿಗದಿಪಡಿಸಿದ್ದು , ಆಗ ಆರೋಪಿಪರ ವಕೀಲರು ಸಮಯ ಕೋರಿದ್ದು , ನಂತರ ದಿ.09-12-2024 ರಂದು ದಿನಾಂಕ ನಿಗದಿಪಡಿಸಿದಾಗ ನಂತರ ಈ ಅರ್ಜಿ ಸಲ್ಲಿಸಿರುತ್ತಾರೆ. ಈ ಕಾರಣದಿಂದ ಸದರಿ ಅರ್ಜಿ ವಜಾ ಆಗತಕ್ಕದ್ದು.

7. ಪ್ರಾ.ಸಾ.1 ದಿ.04-11-2023 ರಂದು ವಿಚಾರಣೆ ಮಾಡಲಾಗಿರುತ್ತದೆ. ಪ್ರಾ.ಸಾ.10 ರಿಂದ 14 ಈ ಸಾಕ್ಷಿಗಳನ್ನು ದಿ.04-01-2024 ರಂದು ಮತ್ತು ದಿ.02-03-2024 ರಂದು ವಿಚಾರಣೆ ಮಾಡಲಾಗಿರುತ್ತದೆ. ಸಂಪೂರ್ಣ ಸಾಕ್ಷಿಗಳ ವಿಚಾರಣೆ ಮಾಡಿರುವುದರಿಂದ ಈಗ ಯಾವ ಕಾರಣಕ್ಕಾಗಿ ಸದರಿ ಸಾಕ್ಷಿಗಳನ್ನು ಪಾಟೀಸವಾಲು ಮಾಡಬೇಕಾಗುತ್ತದೆ ಎಂದು ಸ್ಪಷ್ಟವಾದ ಕಾರಣಗಳನ್ನು ಅರ್ಜಿಯಲ್ಲಿ ನಮೂದು ಮಾಡಿರುವುದಿಲ್ಲ.

8. ಕೆಲವು ಸತ್ಯಾಂಶಗಳನ್ನು ತೆಗೆದು , ಅವುಗಳ ಬಗ್ಗೆ ಸದರಿ ಸಾಕ್ಷಿಗಳ ಪಾಟೀಸವಾಲು ಮಾಡಬೇಕಾಗಿರುತ್ತದೆ ಅಂತಾ ಬರೆದ ಅಂಶಗಳನ್ನು ಪರಿಶೀಲಿಸಲಾಗಿ ಸದರಿ ಸಾಕ್ಷಿಗಳನ್ನು ವಿವರವಾಗಿ ಪಾಟೀಸವಾಲು ಮಾಡಿರುವುದರಿಂದ ಈಗ ಪುನಃ ಸದರಿ

ಸಾಕ್ಷಿಗಳನ್ನು ಕರೆಸಿ ಪಾಟೀಸವಾಲು ಮಾಡಲು ಅವಕಾಶ ಕೊಟ್ಟಲ್ಲಿ ಕೇಳಿದ ಪ್ರಶ್ನೆಗೆ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿ ಉತ್ತರಿಸಿದಲ್ಲಿ ಅಭಿಯೋಜಕ ಪಕ್ಷಕ್ಕೆ ತೊಂದರೆಯುಂಟಾಗುವ ಸಾಧ್ಯತೆ ಇರುತ್ತದೆ. ಈ ಕಾರಣದಿಂದ ಅರ್ಜಿ ವಜಾ ಆಗತಕ್ಕದ್ದು.

9. ಆರೋಪಿ ಪರ ವಕೀಲರು ತಡವಾಗಿ ಅರ್ಜಿ ಸಲ್ಲಿಸಲು ಸೂಕ್ತ ಕಾರಣಗಳನ್ನು ನೀಡಿರುವುದಿಲ್ಲ. ಯಾವ ಕಾರಣಕ್ಕೋಸ್ಕರವಾಗಿ ಸಾಕ್ಷಿಗಳ ಮುಂದುವರೆದ ಪಾಟೀಸವಾಲು ಮಾಡಬೇಕಾಗುತ್ತದೆ ಎಂಬುದರ ಬಗ್ಗೆ ಸಮಂಜಸವಾದ ಕಾರಣಗಳನ್ನು ನೀಡಿಲ್ಲದೆಯಿರುವುದರಿಂದ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇಲ್ಲದಿರುವುದರಿಂದ ಸದರಿ ಅಂಶ–1 ನಕಾರಾತ್ಮಕವಾಗಿ ಉತ್ತರಿಸಲಾಯಿತು.

10. ಅಂಶ 2ಃ– ಈ ಕೆಳಗಿನಂತೆ

## ಆದೇಶ

ಆರೋಪಿಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ.311ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಲಾಯಿತು.

ಖರ್ಚಿನ ಮೇಲೆ ಆದೇಶವಿಲ್ಲ.

ವಾದ ವಿವಾದಕ್ಕಾಗಿ ಮುಂದಿನ ದಿನಾಂಕ 17–03–2025

SD/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ದಾವಣಗೆರೆ .